ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರು ತಾಲ್ಲೂಕು ಕೋಡೆ ಗ್ರಾಮದಲ್ಲಿ ಆರಕ್ಷಕ ಠಾಣೆಯ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆರಕ್ಷಕ ಠಾಣೆಯನ್ನು ತೆರೆಯಲು ಸರ್ಕಾರವು ಪರಿಶೀಲಿಸುತ್ತಿದೆಯೇ ಹಾಗೂ ಠಾಣೆಯನ್ನು ಯಾವಾಗ ತೆರೆಯಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ರಾಜ್ಯದ ಪಶುಚಿಕಿತ್ಸಾಲಯಗಳಿಗೆ ಔಷಧಿ ವಿತರಣೆ.

118 (676) ಶ್ರೀ ಟಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಪಶುವೈದ್ಯ ಶಾಲೆಗಳಿಗೆ ಔಷಧಿಗಳನ್ನು ಒದಗಿಸಲು ಮೀಸಲಿರಿಸಿದ ಹಣವೆಷ್ಟು;

ಆ) ಮೀಸಲಿರಿಸಿದ ಹಣದಲ್ಲಿ ಈವರೆಗೆ ಖರೀದಿಸಿದ ಔಷಧಿಗಳ ಬೆಲೆ ಎಷ್ಟು ? ಅವುಗಳನ್ನು ಯಾವ ರೀತಿ ವಿತರಿಸಲಾಗಿದೆ;

ಇ) ಔಷಧಿಗಳನ್ನು ಪೂರೈಸಲು ಆಗಿರುವ ವಿಳಂಬಕ್ಕೆ ಕಾರಣಗಳೇನು ಹಾಗೂ ವಿಳಂಬ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಈ) ಔಷಧಿಗಳಿಗಾಗಿ ಆಯವ್ಯಯದಲ್ಲಿ ಒದಗಿಸಿರುವ ಹಣವು ಅವಶ್ಯಕತೆಗಿಂತ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಹೆಚ್ಚಿನ ಹಣವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ರೂ. 2,76,15,000.00

ಆ) ರೂ. 1,60,95,615.00 ಜಿಲ್ಲೆಯ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರುಗಳ ಮುಖಾಂತರ ವಿತರಿಸಲಾಗಿದೆ.

ಇ) ಔಷಧಿಗಳನ್ನು ಸಕಾಲದಲ್ಲಿ ಪೂರೈಸಲಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹೌದು.

ಹೆಚ್ಚಿನ ಹಣವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ನೀರಾವರಿ ಇಲಾಖೆಯಲ್ಲಿರುವ ಇಂಜಿನಿಯರ್‌ಗಳ ಸೇವೆ

119 (6) ಶ್ರೀ. ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ನೀರಾವರಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರುಗಳಾಗಿ ಸೇವೆ ಸಲ್ಲಿಸುತ್ತಿರುವ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು ?

ಆ) ಇವರುಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರುಗಳ ಸಂಖ್ಯೆ ಎಷ್ಟು ಮತ್ತು ಪರಿಶಿಷ್ಟ ಜಾತಿಗೆ ಸೇರಿದವರುಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) 15

ಆ) 1) ಹಿಂದುಳಿದ ವರ್ಗ :1
2) ಪರಿಶಿಷ್ಟ ಜಾತಿ :7

ಜಗಜ್ಯೋತಿ ಬಸವೇಶ್ವರ ಪ್ರತಿಮೆ ಸ್ಥಾಪನೆ

120 (744) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಗಜ್ಯೋತಿ ಬಸವೇಶ್ವರರವರ ಸಮಾಜ ಸುಧಾರಣೆಯ ಬಗ್ಗೆ ಹೇಳಿಕೆ ಏನು ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಜಗಜ್ಯೋತಿ ಬಸವೇಶ್ವರರವರ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪನೆಯ ಬಗ್ಗೆ ಸರ್ಕಾರದ ಪ್ರಸ್ತಾವನೆ ಇದೆಯೇ;

ಇ) ಇಲ್ಲದಿದ್ದಲ್ಲಿ ಬಸವೇಶ್ವರರವರ ಪ್ರತಿಮೆಯನ್ನು ವಿಧಾನಸೌಧದ ಮುಂಬಾಗದಲ್ಲಿ ಸ್ಥಾಪನೆಯ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಇಲ್ಲ

ಇ) ಇದನ್ನು ಪರಿಶೀಲಿಸಲಾಗುವುದು

High Court Bench at Gulbarga

121(745) Sri Basavaraj Patil Attur (Basavakalyana)

Will the Chief minister be pleased to state.

a) Whether the Govt. has taken any decision to set up Benches of the Karnataka High court in places other than Bangalore;

b) If so.the places already selected for the setting up of a bench of a High Court;